ಪ್ರಶಸ್ತಿಗಳು ಬರುತ್ತಿರುವುದು ಒಂದು ದೊಡ್ಡ ಸಮಸ್ಯೆ. ಯುವ ಲೇಖಕರನ್ನು ಉತ್ತೇಜಿಸಬೇಕು ಎನ್ನುವುದು ಸರಿ. ಬಹುಮಾನ, ಪ್ರಶಸ್ತಿ, ಸಹಾಯಧನ ನೀಡುವುದು ಸುಲಭದ ದಾರಿ. ಯುವಲೇಖಕರಿಗೆ ಓದಿನ ಗೌರವ ದೊರೆಯುವ ಬದಲು, ಓದಿನ ಅವಕಾಶಗಳು ದೊರೆಯುವುದರ ಬದಲು ಪ್ರಸಿದ್ಧಿ–ಪ್ರಶಸ್ತಿ ದೊರೆಯುತ್ತಿವೆ. ಇವು ಒಬ್ಬ ಲೇಖಕನನ್ನು ಕಟ್ಟುವುದರ ಜೊತೆಗೆ ನಾಶ ಕೂಡ ಮಾಡಬಲ್ಲವು. ಇದು ನಮ್ಮ ಸಾಹಿತ್ಯಿಕ ಸಂಸ್ಥೆಗಳು ಬೇಜವಾಬ್ದಾರಿಯಿಂದ ಮಾಡುತ್ತಿರುವ ಕೆಲಸ. ಶಿಕ್ಷಣ ಕ್ಷೇತ್ರದಲ್ಲೋ ನೌಕರಿ ಸಂದರ್ಭದಲ್ಲೋ ದೊರೆಯುವ ಅವಕಾಶಗಳು ಬರವಣಿಗೆ ಸಂದರ್ಭದಲ್ಲಿ ಬಂದರೆ ಅದನ್ನು ಹೇಗೆ ನೋಡುವುದು? ಪರಿಶಿಷ್ಟ ವರ್ಗದವರಿಗೆ ಕಾವ್ಯಕಮ್ಮಟ ನಡೆಸುವುದನ್ನು ಹೇಗೆ ನೋಡಬಹುದು? ಹೆಣ್ಣುಮಕ್ಕಳಿಗೆ ಕಥಾಕಮ್ಮಟ ನಡೆದರೆ – ನಡೆಸುವವರು, ಭಾಗವಹಿಸುವವರು, ಉಪನ್ಯಾಸಕರು ಎಲ್ಲರೂ ಹೆಣ್ಣುಮಕ್ಕಳೇ ಆದರೆ ಏನಾಗಬಹುದು? ಅವರನ್ನು ಲೇಖಕರನ್ನಾಗಿ ಮಾಡುತ್ತಿದ್ದೇವೆಯೋ ವಕೀಲರನ್ನಾಗಿ ಮಾಡುತ್ತಿದ್ದೇವೆಯೋ? ಸಮ್ಮೇಳನಗಳು, ಸಂಭ್ರಮಗಳು ಯಾವುದು ಅಪ್ರಸ್ತುತವೋ ಅದನ್ನು ಪ್ರಸ್ತುತವನ್ನಾಗಿ ಮಾಡಿ, ಯಾವುದು ಪ್ರಸ್ತುತವೋ ಅದು ಪಕ್ಕಕ್ಕೆ ಸರಿಸುತ್ತಿವೆ. ಇದು ಪಠ್ಯಪುಸ್ತಕಗಳಿಂದಲೇ ಶುರುವಾಗುತ್ತದೆ. ಪ್ರಾದೇಶಿಕ, ಲಿಂಗ, ಸಾಮಾಜಿಕ ನ್ಯಾಯ ಎಲ್ಲವೂ ಒಳಗೊಂಡಂತೆ ಗುಣವನ್ನು ಗಮನಿಸುವುದು, ಹುಡುಕುವುದು ಹೇಗೆ ಎನ್ನುವುದು ಮುಖ್ಯ'' ಎಚ್‌ಎಸ್‌ಆರ್ ಮಾತು ಹೆಚ್ಚು ತೀಕ್ಷ್ಣವಾಗಿತ್ತು.



''ಇದು ಎಲ್ಲ ಕ್ಷೇತ್ರಗಳಲ್ಲೂ ಇದೆ. ಭೀಮಸೇನ ಜೋಷಿಗೆ ಅರವತ್ತು ವರ್ಷ ಆಗುವವರೆಗೆ ಪ್ರಶಸ್ತಿ ಬರಲಿಲ್ಲ, ಈಗ ಹದಿನಾರು ವರ್ಷಕ್ಕೆ ಪ್ರಶಸ್ತಿ ಬರುತ್ತದೆ'' ಎಂದ ದಿವಾಕರ್ ಮಾತಿನಲ್ಲೂ ನಾಯಿಕೊಡೆಗಳಂಥ ಪ್ರಶಸ್ತಿಗಳ ಬಗ್ಗೆ ಅಸಮಾಧಾನವಿತ್ತು.

ಸಾಹಿತ್ಯದ ಸಂದರ್ಭದಲ್ಲಿ ಸಾಮಾಜಿಕ ನ್ಯಾಯದ ಪ್ರಶ್ನೆಯ ಬಗ್ಗೆ ಇಬ್ಬರಿಗೂ ಸಮ್ಮತವಿದೆ. ಸಾಮಾಜಿಕ ನ್ಯಾಯದ ಜೊತೆಯಲ್ಲಿ ಗುಂಪುಗಾರಿಕೆ ಹಾಗೂ ಸ್ವಜನಪಕ್ಷಪಾತ ಸೇರಿಕೊಂಡರೆ ಕಷ್ಟ ಎನ್ನುವುದು ಇಬ್ಬರ ಅಭಿಮತ.

''ಹೋರಾಟಗಾರತನಕ್ಕೂ ಕವಿತನಕ್ಕೂ ಸಂಬಂಧ ಇದೆ ಅಂದುಕೊಳ್ಳುವ, ಒಂದೂವರೆ ಸಂಕಲನ ಬಂದಿರದಿದ್ದರೂ ಹೋರಾಟದಲ್ಲಿ ಇರುವ ಕಾರಣಕ್ಕೆ ಖ್ಯಾತ ಕವಿಯಾಗುವ ಸಂದರ್ಭ ಇಂದಿನದು. ಹೋರಾಟದಲ್ಲಿ ಇದ್ದ ಕಾರಣಕ್ಕೇ ಕವಿಯಾಗುವುದಾದರೆ, ಹೋರಾಟದಲ್ಲಿ ಇಲ್ಲದೆಯೂ ಅದರ ಪರವಾಗಿ ಬರೆದವರನ್ನು, ಒಳ್ಳೆಯ ಕಾವ್ಯ ಬರೆದವರನ್ನು ಏನು ಮಾಡಬೇಕು? ಈ ನಿಟ್ಟಿನಲ್ಲಿ ನಾವು ಮತ್ತೆ ಮತ್ತೆ ನೆನಪು ಮಾಡಿಕೊಳ್ಳಬೇಕಾದ್ದು ಕುವೆಂಪು ಅವರನ್ನು. ನೀವು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಲಿಲ್ಲ ಏಕೆ ಎನ್ನುವ ಪ್ರಶ್ನೆಗೆ ಕುವೆಂಪು ಹೇಳಿದ್ದು – 'ನನ್ನ ಪಾಂಚಜನ್ಯ ಸಂಕಲನದ ಕವಿತೆಗಳನ್ನು ಓದಿ. ಯಾವುದೇ